(ಇಂದು ದಿನಾಂಕ:04-09-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ.</u>**

1. ನಾನು ಪೋಟೋಗ್ರಾಫರ ಕೆಲಸ ಮಾಡುತ್ತಿದ್ದೆ. ನಮ್ಮ ಆದಾಯದಿಂದ ನಮ್ಮ ಕುಟುಂಬ ನಡೆಯುತ್ತದೆ ಎಂದರೆ ಸರಿಯಲ್ಲ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿಃ 28-05-2024 ರಂದು ಬೆಳಿಗ್ಗೆ 7-30 ರ ಸುಮಾರಿಗೆ ಅಪಘಾತವಾಗಿರುತ್ತದೆ. ಆ ಸಮಯದಲ್ಲಿ ನಾನು ಗೋನವಾರ ಗ್ರಾಮದಲ್ಲಿದ್ದೆ. ಅಪಘಾತದ ಬಗ್ಗೆ ನಮ್ಮ ಸಂಬಂಧಿ ಬಸವರಾಜರವರು ಹೇಳಿರುತ್ತಾರೆ. ಬಸವರಾಜ ಇವರ ಮೊಬೈಲ್ ಸಂಖ್ಯೆ ನನಗೆ ನೆನಪಿಲ್ಲ. ಬಸವರಾಜ ಇವರು ಅಂಕಸದೊಡ್ಡಿಯಲ್ಲಿ ಇರುತ್ತಾರೆ. ಗೋನವಾರದಿಂದ ಅಂಕಸದೊಡ್ಡಿ ಗ್ರಾಮ 5 ಕಿಮಿ ಅಂತರದಲ್ಲಿದೆ. ಅಪಘಾತದ ವಿಷಯ ತಿಳಿದ ನಂತರ ನಾನು ಅಪಘಾತದ ಸ್ಥಳಕ್ಕೆ 15 ನಿಮಿಷದಲ್ಲಿ ಹೋಗಿರುತ್ತೇನೆ. ನಾನು ಹೋದಾಗ ಬಸವರಾಜ ಇವರು ಸ್ಥಳದಲ್ಲಿಯೇ ಇದ್ದರು. ಅಪಘಾತದಲ್ಲಿ ಎದುರುದಾರ ನಂ.1 ಇವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ಆದರೆ ಸಣ್ಣಪುಟ್ಟ ಗಾಯಗಳು ಆಗಿದ್ದವು.
2. ನಂತರ ನಾವು ನಮ್ಮ ತಂದೆಯವರನ್ನು ಲಿಂಗಸಗೂರಿನ ಸರ್ಕಾರಿ ಆಸ್ಪತ್ರೆಗೆ ಕಾರಿನಲ್ಲಿ ಹೋಗಿರುತ್ತೇನೆ. ಲಿಂಗಸಗೂರಿನ ಸರ್ಕಾರಿ ಆಸ್ಪತ್ರೆಯ ವೈದ್ಯರು ತೀವ್ರಸ್ವರೂಪದ ಗಾಯಗಳಾಗಿದ್ದರಿಂದ ಮೃತ ಶಿವರಾಜ ಇವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಕಟ್ಟಿ ಆಸ್ಪತ್ರೆಯಲ್ಲಿ ಎಮ್ ಎಲ್ ಸಿ ಮಾಡಿಸಿರುತ್ತೇವೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾವು ಅಪಘಾತವಾದ ಎರಡು ದಿನಗಳ ನಂತರ ಪೋಲೀಸರಿಗೆ ತಿಳಿಸಿರುತ್ತೇವೆ ಎಂದರೆ ಸರಿ. ನಮ್ಮ ತಂದೆಯವರ ವಯಸ್ಸಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಮುಂದಿನ ದಿನಗಳಲ್ಲಿ ಎಲ್ಲ ದಾಖಲೆಗಳನ್ನು ಸಲ್ಲಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಮ್ಮ ತಂದೆಗೆ ಅಪಘಾತವಾದಾಗ 55-56 ವರ್ಷ ವಯಸ್ಸು ಇತ್ತು ಎಂದರೆ ಸರಿಯಲ್ಲ. ಅವರಿಗೆ ಸುಮಾರು 48

ವರ್ಷ ವಯಸ್ಸು ಇತ್ತು. ನಮ್ಮ ತಂದೆಯವರು ನಡೆಸುತ್ತಿದ್ದ ಮೋ.ಸೈ. ಸಂಖ್ಯೆ ಕೆಎ 36 ಎಚ್ ಡಿ 5579 ಇತ್ತು. ನನ್ನ ದೂರಿನಲ್ಲಿ ಬೈಕ್ ಸಂಖ್ಯೆ ನಮೂದು ಮಾಡಿಲ್ಲ ಎಂದರೆ ಸರಿ.

3. ನಮ್ಮ ತಂದೆಯವರಿಗೆ ವಾಹನ ಚಾಲನಾ ಪರವಾನಿಗೆ ಇತ್ತು. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರೆಗೆ ಚಾಲನಾ ಪರವಾನಿಗೆ ಇಲ್ಲ, ಅವರಿಗೆ ವಾಹನ ಚಾಲನೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕಾಗಿ ಚಾಲನಾ ಪರವಾನಿಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಮೋ.ಸೈ.ಗೆ ಮುಂದುಗಡೆಯಿಂದ ಡಿಕ್ಕಿಪಡಿಸಿರುತ್ತಾರೆ. ಸಾಮಾನ್ಯವಾಗಿ ಮುಖಾಮುಖಿ ಟಕ್ಕರ ಕೊಟ್ಟಲ್ಲಿ ಎರಡೂ ವಾಹನಗಳು ಜಖಂಗೊಳ್ಳುತ್ತವೆ ಎಂದರೆ ಸರಿ. ನಮ್ಮ ತಂದೆಯವರ ಮೋ.ಸೈ.ಗೆ ಯಾವುದೇ ಜಖಂ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಮೋ.ಸೈ.ಗೆ ಕೆಎ-36 ಎಚ್ ಬಿ -8578 ನೇದ್ದರ ವಾಹನ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಸ್ಕಿಡ್ ಆಗಿ ಬಿದ್ದು ಅಪಘಾತ ನಡೆದಿರುತ್ತದೆ ಎಂದರೆ ಸರಿಯಲ್ಲ. ಮೋ.ಸೈ.ಸಂಖ್ಯೆ ಕೆಎ-36 ಎಚ್ ಬಿ -8578 ನೇದ್ದರ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಮೋ.ಸೈ.ಗೆ ಇದ್ದ ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ಸದರಿ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

4. ನಾವು ಮತ್ತು ಪೋಲೀಸರು ಸೇರಿ ಗುರುಬಸವರಾಜ ಇವರ ಮೋ.ಸೈ. ನ್ನು ಪರಿಹಾರ ಪಡೆಯಲು ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಮಸ್ಕಿ ಕೆಇಬಿಯಲ್ಲಿ ಹೊರಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದರು. ಹೊರಗುತ್ತಿಗೆ ನೇಮಕಾತಿ ಬಗ್ಗೆ ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವೇತನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-13 ನ್ನು ನಾನೇ ಸೃಷ್ಟಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಶ್ರೀದೇವಿ ಎಲೆಕ್ಟ್ರಿಕಲ್ಸ್ ಇವರ ಕಾನ್‌ಟ್ರ್ಯಾಕ್ಟರ್

ಪರವಾನಿಗೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಮ್ಮ ತಂದೆಯವರ ಖಾತೆಗೆ ವೇತನ ಜಮಾ ಆದ ಬಗ್ಗೆ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಮ್ಮ ತಂದೆಯವರಿಗೆ ವಯಸ್ಸಾದ ಕಾರಣ ಅವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ತಲೆಗೆ ಬಲವಾದ ಪೆಟ್ಟು ಬಿದ್ದು ಮರಣ ಹೊಂದಿರುತ್ತಾರೆ ಎಂದರೆ ಸರಿ. ಅಪಘಾತದ ದಿನ ನಮ್ಮ ತಂದೆಯವರು ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಹೆಲ್ಮೆಟ್ ಹಾಕಿದ ಬಗ್ಗೆ ಪೋಲೀಸ್ ದಾಖಲೆಯಲ್ಲಿ ನಮೂದು ಇಲ್ಲ ಎಂದರೆ ಸರಿ.

5. ನಮ್ಮ ತಂದೆಯವರು ಬಾಗಲಕೋಟೇಯ ಕಟ್ಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಂಗಿ ನಮ್ಮ ತಂದೆಯ ಆದಾಯದ ಮೇಲೆ ಅವಲಂಬಿತರಲ್ಲದ ಕಾರಣ ನಾನು ಮತ್ತು ನನ್ನ ತಂಗಿ ಪರಿಹಾರ ಕೇಳಲು ಅರ್ಹರಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ ನಮ್ಮ ತಂದೆಯವರ ಸ್ವತಃ ಕಾರಣವಾಗಿದ್ದು, ಎದುರುದಾರ ನಂ.1 ಇವರು ಹೊಣೆಗಾರರಲ್ಲ ಎಂದರೆ ಸರಿಯಲ್ಲ.

6. ಎದುರುದಾರರ ನಂ.1 ರವರಿಗೆ ಸೂಕ್ತವಾದ ಚಾಲನಾ ಪರವಾನಿಗೆ ಇಲ್ಲದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು